# ಶ್ರೀ ವಿದ್ಯಾಮಾನ್ಯ ತೀರ್ಥರು

||ಬ್ರಹ್ಮಚರ್ಯಹರಿಪ್ರೀತಿ ಸುವಿದ್ಯಾವಾದಶಾಲಿನ: |
ಇಷ್ಟದಾನ್ ಕಷ್ಟಹಲತನ್ರ್ನ: ವಿದ್ಯಾಮಾನ್ಯಾನ್ನುನೀನ್ನುಮ : ||

**ಕೃಪೆ**

ಶ್ರೀಶ ಸಮೀರ ದಾಸ

ಫಣೀಂದ್ರ

ಈ ಶತಮಾನ ಕಂಡ ಶಕಪುರುಷರು, ಮಧ್ವ ಸಿದ್ಧಾಂತದ ಇತಿಹಾಸದಲ್ಲೇ ಈಗಿನ ಕಾಲದಲ್ಲೂ ಸ್ವರ್ಣಾಕ್ಷರ ಬರೆದಿಡುವ ಹೆಸರು ಮತ್ತು ಸಾಧನೆಗಳು, ಭಂಡಾರಕೇರಿ ಮತ್ತು ಫಲಿಮಾರು ಉಭಯಮಠಗಳ ಗುರುಗಳು, ಶ್ರೀ ಕೃಷ್ಣನ ಆರಾಧಕರು ಮತ್ತು ಇಂದಿನ ಜನಾಂಗಕ್ಕೂ ಅವರ ಮಾತುಗಳು ಎಷ್ಟೋ ಜನರ ಜೀವನವನ್ನೇ ಬದಲಾಯಿಸಿದ ಮಹಾತ್ಮರಾದ ಶ್ರೀ ವಿದ್ಯಾಮಾನ್ಯ ತೀರ್ಥರ ಆರಾಧನಾ ಮಹೋತ್ಸವ.

ಮಾತಾಪಿತರು : ಶ್ರೀ ಕುಪ್ಪಣ್ಣ ತಂತ್ರಿಗಳು ಮತ್ತು ಶ್ರೀಮತಿ ರಾಧಮ್ಮ

ಜನ್ಮ ಸ್ಥಳ : ಎರ್ಮಾಳು (ಉಡುಪಿಯ ಬಳಿ)
ಜನ್ಮ ವರ್ಷ – 1913
ಜನ್ಮ ನಾಮ – ನಾರಾಯಣ
ಪ್ರಾಥಮಿಕ ವಿದ್ಯಾಭ್ಯಾಸ : ತಂದೆಗಳಿಂದ
ಉಪನಯನ – 5.1.1925 – 8ನೇ ವಯಸಿನಲ್ಲಿ

ಮಂತ್ರೋಪದೇಶ – ಶತಾಯುಷಿ ಶ್ರೀ ಸುಧೀಂದ್ರ ತೀರ್ಥರು.

ಆಶ್ರಮ ಗುರುಗಳು : ಶ್ರೀ ವಿಬುಧಪ್ರಿಯ ತೀರ್ಥರು

ಹೆಚ್ಚಿನ ವಿದ್ಯಾಭ್ಯಾಸ

೧. ಆಶ್ರಮ ಗುರುಗಳಾದ ಶ್ರೀ ವಿಬುಧಪ್ರಿಯ ತೀರ್ಥರಿಂದ ಮೂರುವರ್ಷ ಕಾಲ

೨. ಶ್ರೀ ವಾಸುದೇವಚಾರ್ಯರಲ್ಲಿ – ದಶಪ್ರಕರಣಗಳು, ದಷೋಪನಿಷತ್ತು, ಮತ್ತು ತತ್ವಪ್ರಕಾಶಿಕಾ ಗ್ರಂಥಗಳ ಪಾಠ

೩. ಉತ್ತರಾಧಿಮಠದ ಶ್ರೀ ಸತ್ಯಧ್ಯಾನರಲ್ಲಿ – ಶ್ರೀಮನ್ನ್ಯಾಯಸುಧ, ತತ್ವಪ್ರಕಾಶಿಕಾ, ನ್ಯಾಯಮೃತ, ತರ್ಕತಾಂಡವ, ಗ್ರಂಥಗಳ ಪಾಠ.

ಗುರುಗಳಿಂದಲೇ ಪ್ರಶಸ್ತಿ : ವಿದ್ಯಾಬ್ಯಾಸವನ್ನು ಪೂರೈಸಿ ಹೊರಟ ಸಂದರ್ಭದಲ್ಲಿ ವಿದ್ಯಾಮಾನ್ಯರನ್ನು ಬಿಗಿದಪ್ಪಿ ಶ್ರೀ ಸತ್ಯಧ್ಯಾನ ತೀರ್ಥರು ಕೊಟ್ಟ ಹೊಗಳಿಕೆ " ನೀವು ವಿದ್ಯಾಭಂಡಾರ ಆಗಿರುವಿರಿ" .

ಸುಧಾಮಂಗಳ : ಮೊದಲನೇ ಸುಧಾಮಂಗಳ ತಿರುಪತಿಯಲ್ಲಿ ಸತ್ಯಧ್ಯಾನರ ಸನ್ನಿದಾನದಲ್ಲಿ,

ಎರಡನೇಯದನ್ನು ಶ್ರೀರಂಗಂ ನಲ್ಲಿ ತಮ್ಮ ಚಾತುರ್ಮಾಸ್ಯ ಸಂದರ್ಭದಲ್ಲಿ

ಶ್ರೀ ವಿದ್ಯಾಮಾನ್ಯ ತೀರ್ಥರ ಸನ್ಯಾಸ ಶಿಷ್ಯರಲ್ಲಿ ಮುಖ್ಯರಾದವರು.

ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು - ಪೇಜಾವರ ಮಠ

ಶ್ರೀ ವಿಶ್ವಪ್ರಿಯ ತೀರ್ಥರು - ಅದಮಾರು ಮಠ

ಶ್ರೀ ಸುಗುಣೇಂದ್ರ ತೀರ್ಥರು - ಪುತ್ತಿಗೆ ಮಠ

ಶ್ರೀ ವಿದ್ಯಾಧೀಶ ತೀರ್ಥರು - ಫಲಿಮಾರು ಮಠ

ಶ್ರೀ ವಿದ್ಯೇಶ ತೀರ್ಥರು - ಭಂಡಾರಕೇರಿ ಮಠ

ಇದರ ಜೊತೆಗೆ ಹಲವಾರು ಬಿಡಿ ಸನ್ಯಾಸ ಶಿಷರು ಇದ್ದಾರೆ.

ಇನ್ನು ಇವರ ಗೃಹಸ್ಥ ಪಂಡಿತರ ಶಿಷ್ಯರು ಇದ್ದಾರೆ ಅಷ್ಟು ಪಟ್ಟಿ ಮಾಡಲು ಸಾಧ್ಯವಿಲ್ಲಾ ಕೆಲವರ ಹೆಸರುಗಳು ಇಲ್ಲಿವೆ

ಶ್ರೀ ಬನ್ನಂಜೆ ಗೋವಿಂದಾಚಾರ್ಯರು

ಶ್ರೀ ಹರಿದಾಸ ಚಾರ್ಯ

ಶ್ರೀ ವಾದಿರಾಜ ಚಾರ್ಯ

ಶ್ರೀ ವೇದವ್ಯಾಸ ತಂತ್ರಿಗಳು

ಶ್ರೀ ಲಕ್ಷ್ಮೀ ನಾರಾಯಣ ಕೊಡಂಚ

ಶ್ರೀ ರಾಘವೇಂದ್ರ ಚಾರ್ಯ ಕೊರ್ಲಹಳ್ಳಿ

ಶ್ರೀ ಕೊರ್ಲಹಳ್ಳಿ ವೆಂಕಟೇಶ ಚಾರ್ಯರು

ಶ್ರೀ ಕೊರ್ಲಹಳ್ಳಿ ನರಸಿಂಹ ಚಾರ್ಯರು

ಇಂದಿಗೂ ಶ್ರೀ ವಿದ್ಯಾಮಾನ್ಯ ತೀರ್ಥರ ಶಿಷ್ಯ ಮತ್ತು ಪ್ರಶಿಷ್ಯ ಪರಂಪರೆ ಬೆಳೆಯುತ್ತಿದೆ.

## ಶ್ರೀ ವಿದ್ಯಾಮಾನ್ಯ ತೀರ್ಥರ ಸಾಧನೆಗಳು

1940 ನೇ ಇಸವಿಯಲ್ಲಿ ಶ್ರೀ ತಾತಸುಬ್ಬರಾಯ ಶಾಸ್ತ್ರಿಗಳ ಜೊತೆ ವಾದವನ್ನು ನಡೆಸಿ ವಿಜಯಪ್ರದರಾದರು

ಕಾಂಚಿಪೂರದಲ್ಲಿ ಕುಂಭಕೋಣದ ಕಾಮಕೋಟಿ ಶಂಕರಾಚಾರ್ಯರ ಅದ್ಯಕ್ಷತೆಯಲ್ಲಿ ನಡೆದ ಅದ್ವೈತ ಸಭೆಯಲ್ಲಿ ಮಹಾಮಹೊಪಾದ್ಯಾಯ ಅನಂತ ಶಾಸ್ತ್ರಿ, ಶ್ರೀ ಸುಬ್ರಮಣ್ಯ ಶಾಸ್ತ್ರಿ ಮುಂತಾದವರ ಜೊತೆ ವಾಗ್ವಾದ – ಜಯ

ಕಾಶಿಯಲ್ಲಿ 1958 ನೇ ಇಸವಿಯಲ್ಲಿ ಮಹಾಮೊಪಾದ್ಯಾಯ ಗಿರಿದರಶರ್ಮ ಚತುರ್ವೇದಿ ಇವರ ಅದ್ಯಕ್ಷತೆಯಲ್ಲಿ ನಡೆದ ಅದ್ವೈತ ಸಭೆಯಲ್ಲಿ ಶ್ರೀಪಾದರ ವೈಶಿಷ್ಟ್ಯ ಮೆಚ್ಚಿ ಗೌರವಾರ್ಪಣೆ.

ಶ್ರೀಅನಂತಕೃಷ್ಣ ಶಾಸ್ತ್ರಿಗಳು ಬರೆದ "ಅದ್ವೈತ ಸುಧಾ" ಎಂಬ ಶ್ರೀಮನ್ನ್ಯಾಯ ಸುಧಾ ಖಂಡನಾರೂಪವಾಗಿ " ಅದ್ವೈತ ತತ್ವಸುಧಾ ಸಮೀಕ್ಷಾ" ಎಂಬ ಗ್ರಂಥ ರಚನೆ

ಲ್ಲಿಯಲ್ಲಿ ದ್ವೈತಾದ್ವೈತ ಚರ್ಚೆಯ ಸಂದರ್ಭದಲ್ಲಿ ಶ್ರೀ ರಾಮಚಂದ್ರ ಶಾಸ್ತ್ರಿ ಪಂಗಡ ಮೊದಲಾದವರ ವಿರುದ್ಧ ವಾಕ್ಯಾರ್ಥ ಮತ್ತು ವಿಜಯ

೧೯೮೯ರಲ್ಲಿ ಶ್ರೀ ವಿದ್ಯಾಮಾನ್ಯತೀರ್ಥರು ಅದ್ವೈತ ಮಠದ ಮೇಲೆ "ಅಚ್ಛೇದ್ಯ ಅಭೇದ್ಯ ಪ್ರಶ್ನೆಗಳು ಎಂಬ ಶೀರ್ಷಿಕೆಯಡಿ ಹತ್ತು ಪ್ರಶ್ನೆಗಳನ್ನೂ ಬರೆದರೂ. ಈ ಪ್ರಶ್ನೆಗಳಿಗೆ ಅದ್ವೈತಿಗಳು ಉತ್ತರಿಸಲು ಹೇಳಿ ತಾವೇ ಖುದ್ದಾಗಿ ಶೃಂಗೇರಿ ಹೊರಟರು. ಅಲ್ಲಿ ಅವರಿಂದ ಪ್ರಶ್ನೆಗಳಿಗೆ ಉತ್ತರಿಸಲಾಗಲಿಲ್ಲ.

ದಿಲ್ಲಿಯಲ್ಲಿ ಅಷ್ಟಗ್ರಹಯೋಗದ ದುಷ್ಪರಿಣಾಮವಾಗಿ ಪರಿಹಾರಕ್ಕಾಗಿ ಶ್ರೀಪಾದರ ನೇತೃತ್ವದಲ್ಲಿ 12 ದಿನಗಳ "ವಿಶ್ವಕಲ್ಯಾಣ ಯಾಗ" . ಇದರಲ್ಲಿ 700 ಕ್ಕೂ ಹೆಚ್ಚು ಜನ ಋತ್ವಿಜರು ಭಾಗವಹಿಸಿದ್ದರು.

ಮಧ್ವ ಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗಾಗಿ ಅವರ ಸಾಧನೆಗೆ ಸಹಾಯಹಸ್ತ

೧. ವಿದ್ಯಾರ್ಥಿ ಪರೀಕ್ಷೆ – ಯಥೇಚ್ಛ ಸಂಭಾವನೆ, ಶಾಸ್ತ್ರ ಪಾಠ- ಪ್ರವಚನಗಳಲ್ಲಿ ನಿರತರಾಗಿರುವ ವಿದ್ಯಾರ್ಥಿಗಳಿಗೆ ಉತ್ತೇಜನ.

೨ ಚರ್ಚಾಘೋಷ್ಟಿಗಳು

೩. ಗ್ರಂಥಧಾನ, ಪಾಠಗಳ ವ್ಯವಸ್ತೆ

೪. ಗ್ರಂಥ ಪ್ರಕಾಶನ – ಶ್ರೀಪಾದರೆ ಸ್ವತಹ ಬರೆದಿರುವ "ದ್ವೈತಸ್ಯ ಅಪೂರ್ವತಾ" , ಗಾಯತ್ರಿ ಗಾಂಭೀರ್ಯ, ತತ್ವ ಸಂಖ್ಯಾನ

ತತ್ವ ವಿವೇಕ, ಉಪಾದಿಖಂಡನ, ಮಾಯವಾದ ಖಂಡನ , ಆದ್ಯಶಂಕರಾಚಾರ್ಯರಿಂದಲೇ ಅದ್ವೈತ ಖಂಡನೆ

ಕನ್ನಡಾನುವಾದ ಪುಸ್ತಕಗಳು, ಶ್ರೀಮದಾಚಾರ್ಯರ ದಶಪ್ರಕರಣಗಳನ್ನೂ, ಶ್ರೀ ಜಯತೀರ್ಥರ ಟೀಕೆ ಹಾಗು ಅನೇಕ ವ್ಯಾಕ್ಯನಗಳೊಂದಿಗೆ ಲೇಖನ.

**ಕಾಷ್ಟಮೌನ ವ್ರತ:**

**1961** ರಲ್ಲಿ ಬದರಿ ಕ್ಷೇತ್ರದಲ್ಲಿ ಶ್ರೀಗಳ ಜೊತೆಯಲ್ಲಿ ಮೂರು ಮಂದಿ ಮಾತ್ರ ಸಹಾಯಕರು. ಉಳಿದವರೆಲ್ಲ ಹರಿದ್ವಾರಕ್ಕೆ ಮರಳಿದರು. ಛತ್ರಒಂದರಲ್ಲಿ ಶ್ರೀಪಾದರ ವಾಸ. ಬೆಳಗಿನ ಜಾವ ನಾಲ್ಕು ಘಂಟೆಗೆ ಏಳುವುದು, ಬಾಹ್ಯ ಶೌಚಗಳನ್ನೂ ಪೂರಿಸುತ್ತಿದ್ದರು. ಭೋರ್ಗರೆವ ಅಲಕಾನಂದ ನದಿಯಲ್ಲಿ ಅವಗಾಹನ ಸ್ನಾನ. ಅನಂತರ ಗೀತಾಭಾಷ್ಯ, ಬ್ರಹ್ಮಸೂತ್ರ ಭಾಷ್ಯ ಪಾಠ, ಸಂಸ್ತಾನ ಪೂಜೆ, ಮದ್ಯಾಹ್ನ ಪುನಃ ಅಲಕನಂದದಲ್ಲಿ ಸ್ನಾನ ಹೀಗೆ ಹೆಚ್ಚುಸಮಯ ಬದರಿಯಾತ್ರೆಯಲ್ಲಿ ಕಾಲ ಕಳೆದರು.

## ವಿದ್ಯಾಮಾನ್ಯ ತೀರ್ಥರ ಮಂತ್ರಾಕ್ಷತೆ ಮತ್ತು ತೀರ್ಥದಿಂದ ಆದ ಪವಾಡಗಳು

೧. ಗಂಗಾಸ್ನಾಕ್ಕೆ ಹೋಗುವ ಸಂದರ್ಭದಲ್ಲಿ ಒಬ್ಬ ಕುಷ್ಠ (ಬಿಳಿ ತೊನ್ನು) ರೋಗವಿರುವ ಕನ್ಯೆ ಇವರಲ್ಲಿ ರೋಗಪರಿಹಾರಕ್ಕಾಗಿ ಪ್ರಾರ್ಥಿಸಲು, ತಾವು ಪೂಜಿಸುತ್ತಿದ್ದ ರಾಯರ ಮೃತ್ತಿಕೆ ಕೊಡಲು ಪುನಃ ಅವರು ಯಾತ್ರೆ ಮುಗಿಸಿ ಬರುವಾಗ ಆ ಕುಷ್ಠ ರೋಗ ಪರಿಹಾರವಾದದ್ದು.

೨. ಮೂಕ ವಾಗ್ಮಿ ಯಾದದ್ದು - ಬೆಂಗಳೂರಿನ ಚಾತುರ್ಮಾಸದಲ್ಲಿ ನಡೆದ ಘಟನೆ. ಪ್ರತಿನಿತ್ಯ ಪೂಜೆಯಾದ ಮೇಲೆ ಗಂಧ ಮತ್ತು ತೀರ್ಥಗಳ ಸ್ವೀಕಾರ ಮತ್ತು ಪೂಜ್ಯಾಯ ರಾಘವೇಂದ್ರ ಮಂತ್ರದಿಂದ ಅವನಿಗೆ ಮಾತು ಬಂದಿರುವುದು.

೩. ಅಚ್ಚುತಾನಂತ ಗೋವಿಂದ ಮಂತ್ರ ಉಪದೇಶದಿಂದ ವೃದ್ದೆಗೆ ಬಂದಿದ್ದ ಬಾಯಿ ರುಚಿಸದೆ ಕೃಶಳಾಗಿದ್ದ ವೃದ್ದೆಗೆ ಮಂತ್ರಾಕ್ಷತೆ ಮತ್ತು ಕಲ್ಲುಸಕ್ಕರೆಯಿಂದ ಅವಳ ನಾಲಿಗೆ ಮೊದಲಿನಂತೆ ರುಚಿಸಿ ಏಳು ದಿನದೊಳಗೆ ಮೊದಲಿನಂತೆ ಆಗಿದ್ದು

೪. ಸೂರ್ಯ ಆದಿತ್ಯ ಮಂತ್ರದಿಂದ ಕಣ್ಣಿನ ಪೂರೇ ಶಸ್ತ್ರಚಿಕಿತ್ಸೆ ಯಿಂದ ತೀರಾ ಮಂದವಾಗಿದ್ದ ದೃಷ್ಟಿ ಪುನಃ ಬಂದದ್ದು

೫. ಗದುಗಿನ ನಾರಾಯಣ ರಾವ್ ದಂಪತಿಗಳಿಗೆ ಸಂತಾನ ಭಾಗ್ಯ

೬. ಹಲವಾರು ಪ್ರೇತಭಾದೆ ನಿವೃತ್ತಿ ಕೇವಲ ಕೃಷ್ಣ ಮುಖ್ಯ ಪ್ರಾಣ ಮಂತ್ರದಿಂದ ಹಲವರಿಗೆ ವಿಘ್ನಗಳ ನಿವಾರಣೆ

೭ . ಒಮ್ಮೆ ದಂಪತಿಗಳು ಮುಂಬೈ ಯಿಂದ ಬಂದಿದ್ದರು ಅವರಲ್ಲಿ ಒಂದು ಸಮಸ್ಯೆ, ವೈದ್ಯರೇ ಅವರ ಮಗುವಿಗೆ ಮುಂದೆ ಚಿಕಿತ್ಸೆ ಫಲಕಾರಿಯಾಗುವುದಿಲ್ಲ ಎಂದಾಗ ಅವರ ಮಾತಾ ಪಿತರು ಗುರುಗಳ ದರ್ಶನ ಮತ್ತು ಮಂತ್ರಾಕ್ಷತೆಯಿಂದ ಬದುಕಿದ ಮಗು ಇಂದು ವೃತ್ತಿಯಲ್ಲಿ ವೈದ್ಯ ನಾಗಿದ್ದಾನೆ ಎಂದರೆ ನಂಬಲಸಾಧ್ಯ.

ಮಳೆ ತರಿಸಿದ ಮಹಾಸ್ವಾಮಿಗಳು

ಎಲ್ಲಾ ಶ್ರೀ ಹರಿಯಿಚ್ಚೆ ಎಂದ ಮಹಾಜ್ಞಾನಿಗಳು

೧. ಗಯಾದಲ್ಲಿ ಚಾತುರ್ಮಾಸ್ಯ ಸಂದರ್ಭ ಸುಡು ಬಿಸಲು, ಮಳೆಬರುವ ಯಾವ ಲಕ್ಷಣ ಇಲ್ಲ, ಅನ್ಯಧರ್ಮಿಯನೊಬ್ಬ ವಿಷ್ಣುಪಾದ ದೇವಾಲಯಕ್ಕೆ ಚಪ್ಪಲಿ ಹಾಕಿಕೊಂಡು ಪ್ರವೇಶಿಸಿದ, ದೇವಾಲಯ ಶುದ್ಧಿ ಕಾರ್ಯ ಮಾಡಬೇಕು ಆದರೆ ಫಲ್ಗು ನದಿಯಲ್ಲಿ ನೀರಿಲ್ಲ, ಗಯಾವಾಡರು ಶ್ರೀಗಳಲ್ಲಿ ಪ್ರಾರ್ಥನೆ ಮಾಡಿದಾಗ ವರುಣ ಮಂತ್ರದಿಂದ ಮಳೆತರಿಸಿದ್ದು ಮತ್ತು ಫಲ್ಗು ನದಿ ತುಂಬಿದ್ದು.

೨. ಪ್ರಯಾಗದಲ್ಲಿ ಮಧ್ವರಾದ್ಧಂತ ಸಂವರ್ದಿನಿ ಸಭೆ ಮತ್ತು ಮಧ್ವನವಮಿ ಸಂದರ್ಭ ಆಕಾಶದಲ್ಲಿ ಕಪ್ಪನೆ ಮೋಡ, ಅಲ್ಲಿನ ಜನರು ಸರ್ವಮೂಲ ಮತ್ತು ಆಚಾರ್ಯ ಮಧ್ವರ ಶೋಭಾಯಾತ್ರೆ, ಅಲ್ಲಿನ ವ್ಯವಸ್ಥಾಪಕರು ಶ್ರೀಗಳಲ್ಲಿ ಮಳೆಯ ಕಳವಳ ವ್ಯಕ್ತ ಪಡಿಸಿದಾಗ ಅವರು ಹೇಳಿದರು ಈ ಶೋಭಾಯಾತ್ರೆ ನಂತರ ಮಳೆ ಬರುತ್ತದೆ ಎಂದು, ಅದೇ ರೀತಿ ಶೋಭಾಯಾತ್ರೆಯ ನಂತರ ಜೋರಾಗಿ ಮಳೆ ಸುರಿಯಿತು.

೩. ದೆಹಲಿಯಲ್ಲಿ 1962 ರಲ್ಲಿ ಅಷ್ಟಗ್ರಹ ಯೋಗ ಆ ಸಂದರ್ಭದಲ್ಲೂ ಮಹಾಮಳೆ, ಗುರುಗಳಲ್ಲಿ ಪ್ರಾರ್ಥನೆ ಮಾಡಿದಾಗ ಮಂತ್ರಜಪದಿಂದ ಮತ್ತು ಭಗವಂತನಲ್ಲಿ ಭಿನ್ನಹ ಮಾಡಿದಾಗ, ಯಜ್ಞ ನಡೆಯುವ ಸಂದರ್ಭದಲ್ಲಿ ಮಳೆ ಸುರಿಯುವುದಿಲ್ಲ ಎಂದು ಹೇಳಿದರು, ಅದೇರೀತಿ ಯಜ್ಞ ಪೂರ್ಣವಾಗುವವರೆಗೂ ಮಳೆ ಇರಲಿಲ್ಲ, ಯಜ್ಞ ದಿಂದ ಪ್ರಸನ್ನನಾದ ವರುಣದೇವ ಎಲ್ಲರು ತಮ್ಮ ತಮ್ಮ ಊರಿಗೆ ತೆರಳಿದ ಮೇಲೆ ಮಳೆ ಸುರಿಸಿದ್ದ.

೪. ಉಡುಪಿ ಶ್ರೀ ಕೃಷ್ಣನಿಗೆ ತಮ್ಮ ಪರ್ಯಾಯ ಕಾಲದಲ್ಲಿ ಸುವರ್ಣ ರಥ ಸಮರ್ಪಣೆ ಮಾಡುವ ಸಂದರ್ಭ, ಇದ್ದಕ್ಕಿದ್ದ ಹಾಗೆ ಜೋರಾಗಿ ಮಳೆ ಸಂಜೆಯಾದರೂ ಮಳೆ ನಿಲ್ಲುತ್ತಿಲ್ಲ. ಆದರೆ ಅಂದೇ ರಥೋತ್ಸವ ಮಾಡಲೇ ಬೇಕು. ಉಡುಪಿಯಲ್ಲಿ ಸಂಭ್ರಮ ಮತ್ತು ಸಾವಿರಾರು ಜನರು ಸೇರಿದ್ದರು, ಎಲ್ಲರು ಶ್ರೀ ವಿದ್ಯಾಮಾನ್ಯರನ್ನು ಕುರಿತು ಕೇಳಿದಾಗ ಶ್ರೀ ಕೃಷ್ಣ ಮುಖ್ಯ ಪ್ರಾಣರು ರಥ ಏರುವವರೆಗೂ ಮಳೆ ನಿಲ್ಲುವುದಿಲ್ಲ ಏರಿದ ಕೂಡಲೇ ಮಳೆ ನಿಲ್ಲುತ್ತದೆ ಎಂದು ಹೇಳಿದಾಗ ಅದೇರೀತಿ ರಥ ಏರುವವರೆಗೂ ಸುರಿಯುತ್ತಿದ್ದ ಮಳೆ ನಿಂತು, ನಂತರ ಉತ್ಸವ ಮುಗಿದಕೂಡಲೇ ಪುನಃ ಪ್ರಾರಂಭವಾಯಿತು.

## ಶ್ರೀ ವಿದ್ಯಾಮಾನ್ಯರ ಅಂತಿಮ ದಿನಗಳು

ವಿಕ್ರಮನಾಮ ಸಂವತ್ಸರ ಚೈತ್ರ ಮಾಸದ ಕೃಷ್ಣ ಪಕ್ಷದ ದಶಮಿ ಶ್ರೀಗಳ ಆರೋಗ್ಯ ಸ್ವಲ್ಪ ಹದಗೆಟ್ಟಿತ್ತು, ಪೇಜಾವರ ಶ್ರೀಗಳ ಮತ್ತು ವೈದ್ಯರ ಒತ್ತಾಯದಿಂದ ಅಂದಿನ ರಾತ್ರಿ ಸ್ವಲ್ಪ ಇಡ್ಲಿಯನ್ನು ತಿಂದಿದ್ದರು, ಮಧ್ಯರಾತ್ರಿ ಸುಮಾರು 12 . 30 ಹೊತ್ತಿಗೆ ವಾಂತಿಯಾಯಿತು, ಶ್ರೀ ಕೊರ್ಲಹಳ್ಳಿ ವೆಂಕಟೇಶ ಚಾರ್ಯರು ಅವರನ್ನು ನೋಡಿಕೊಳ್ಳುವ ಕೆಲಸವಾಗಿತ್ತು. ಬಹಳ ಸುಸ್ತಾಗಿದ್ದ ಕಾರಣ ಸ್ವಲ್ಪ ಎಳನೀರು ಕೊಡಲೇ ಎಂದು ಕೇಳಿದಾಗ ಇಂದು ಯಾವ ತಿಥಿ ಎಂದು ಕೇಳಿದರು. ನಿಜ ನುಡಿದರೆ ಸ್ವಾಮಿಗಳು ಸ್ವೀಕರಿಸುವುದಿಲ್ಲವೆಂದು ತಿಳಿದು ಇಂದು ದಶಮಿ ಎಂದೇ ಹೇಳಿದರು. ಒತ್ತಾಯವಾಗಿ ಕುಡಿಸಿದರು ಸ್ವಾಮಿಗಳು ಗಂಟಲೊಳಗೆ ಹೋಗಲಿಲ್ಲ, ಅಷ್ಟು ಏಕಾದಶಿ ಬಗೆಗಿನ ನಿಷ್ಠೆ ಯಾಗಿತ್ತು. ತಮ್ಮ ಜೀವಮಾನದಲ್ಲಿ ಸುಮಾರು 87 ವರ್ಷ ಏಕಾದಶಿ ಮಾಡಿದ್ದರು ಸುಮಾರು 2000 ಕ್ಕೂ ಹೆಚ್ಚು ಏಕಾದಶಿ ಮಾಡಿದ ಮಹಾತ್ಮರು. ಮುಂದೆ 14 - 05 - 2000 ವೈಶಾಖ ಶುದ್ಧ ಏಕಾದಶಿ ಮೋಹಿನಿ ಏಕಾದಶಿ ಯಂದೇ ಫಲಿಮಾರಿನಲ್ಲಿ ಈ ಲೋಕಿಕ ಕಾಯ ತ್ಯಜಿಸಿ ಶ್ರೀ ಹರಿಪಾದ ಸೇರಿದರು.

ಈ ಲೇಖನಕ್ಕೆ ಮಾರ್ಗದರ್ಶನ ನೀಡಿದ ಶ್ರೀ ಕೊರ್ಲಹಳ್ಳಿ ವೆಂಕಟೇಶಚಾರ್ಯರಿಗೆ ನಮನಗಳು

ಮಾಧ್ವ ಸಿದ್ಧಾಂತಕ್ಕೆ ಬಹಳ ಕೊಡುಗೆಯನ್ನು ನೀಡಿದ ಮಹಾಮಹಿಮರು ಹೀಗೆ ಶ್ರೀ ವಿದ್ಯಾಮಾನ್ಯ ತೀರ್ಥರನ್ನು ನೆನೆದ ದಿನವೇ ಸುದಿನ. ಅವರ ಪೀಠದಲ್ಲೇ ಮುಂದೆ ಬಂದ ಶ್ರೀ ವಿದ್ಯಾಧೀಶ ತೀರ್ಥರು ಅವರಂತೆ ಇಂದು ಬಹಳ ಸಾಧನೆ ಮಾಡುತ್ತಿದ್ದಾರೆ. ಶ್ರೀ ಕೃಷ್ಣನಿಗೆ "ಸುವರ್ಣ" ಗೋಪುರವನ್ನು ನಿರ್ಮಿಸಿ ಗುರುಗಳ ಇಚ್ಛೆಯನ್ನು ಪೂರ್ಣಗೊಳಿಸಿದ್ದಾರೆ.

ಪ್ರೀತೋಸ್ತು ಕೃಷ್ಣ ಪ್ರಭೋ